# ಅರಿವಿನ ಅರಿವು ಸತ್ಯ

ಸತ್ಯವು ಎಲ್ಲರಲ್ಲೂ ಎಲ್ಲ ಜೀವಜಾತದಲ್ಲೂ ನೆಲಸಿದೆ ಎಂದು ಎಲ್ಲ ಧರ್ಮಗ್ರಂಥಗಳೂ ಹೇಳುತ್ತವೆ. ಮನುಷ್ಯರನ್ನು ಬಿಟ್ಟು ಉಳಿದ ಜೀವಜಾತಗಳಿಗೆ ತಮ್ಮಲ್ಲಿ ಸತ್ಯವು ನೆಲಸಿರುವುದರ ಅರಿವಿದೆಯೋ ಇಲ್ಲವೋ ಅಷ್ಟು ಖಚಿತವಾಗಿ ಹೇಳಲಾಗುವುದಿಲ್ಲ. ಆದರೂ ಮನುಷ್ಯರಿಗಲ್ಲದೆ ಇತರ ಜೀವಗಳಿಗೆ ಈ ಅರಿವು ಇಲ್ಲವೆನ್ನುವುದೇ ಸದ್ಯದ ಗೃಹೀತವಾಗಿದೆ. ಏಕೆಂದರೆ ಮನುಷ್ಯರಿಗೆ ಅರಿವಿದೆ ಮತ್ತು ಮನುಷ್ಯರಿಗೆ ಮಾತ್ರ ಅರಿವಿನ ಅರಿವು ಇದೆ. (ಹೀಗೆ ಹೇಳುತ್ತಿರುವುವವ ಕೂಡಾ ಮನುಷ್ಯರೇ!) ಅರಿವಿನ ಅರಿವಿಗೂ, ಸತ್ಯವು ನಮ್ಮಲ್ಲಿ ನೆಲಸಿದೆ ಎಂಬ ಮಾತಿಗೂ ನೇರ ಸಂಬಂಧವಿದೆ. ಹೇಗೆಂದರೆ ಸತ್ಯವೆಂದರೆ ಬರಿ ಅರಿವಲ್ಲ. ಸತ್ಯವೆಂದರೆ ಅರಿವಿನ ಅರಿವು. ಪಂಚೇಂದ್ರಿಯಗಳ ಮೂಲಕ ನಿಸರ್ಗದ ಒಡನಾಟದಲ್ಲಿ ನಾವು ಪಡೆಯುತ್ತಿರುವುದೆಲ್ಲವನ್ನೂ ಅರಿವು ಎನ್ನಬಹುದು. ಇದನ್ನು ಸುಳ್ಳೆನ್ನುವಂತಿಲ್ಲ. ಆದರೆ ಹೀಗೊಂದು ಅರಿವು ನಮಗೆ ಇಂದ್ರಿಯಗಳ ಮೂಲಕ ಉಂಟಾಗುತ್ತಿದೆ ಎನ್ನುವ ಸ್ವ-ಪ್ರಜ್ಞೆಯುಂಟಲ್ಲ ಅದನ್ನು ಅರಿವಿನ ಅರಿವು ಎನ್ನುತ್ತೇವೆ. ಇದನ್ನೇ ಸತ್ಯ ಎನ್ನುವುದು. ಇದನ್ನೇ ಸತ್ಯವು ನಮ್ಮಲ್ಲಿ ನೆಲಸಿದೆ ಎನ್ನುವುದು. ಇಂದ್ರಿಯಗಳು ಕೊಡುವ ಅರಿವನ್ನೂ ಸತ್ಯ ಎಂದೇ ಹೇಳುತ್ತೇವಾದರೆ, ಅದರಾಳದ ಸ್ವಪ್ರಜ್ಞೆಯ ಈ ಅರಿವನ್ನು ಸತ್ಯದ ಸತ್ಯ ಎನ್ನಬೇಕಾಗುತ್ತದೆ! ಉಪನಿಷತ್ತು ಸತ್ಯಸ್ಯ ಸತ್ಯಮ್- ಸತ್ಯದೊಳಗಿನ ಸತ್ಯ ಎಂದೇ ಇದನ್ನು ಹೇಳಿದೆ. ಸತ್ಯದ ಸತ್ಯ ಎಂಬ ಪದವನ್ನು ಬಳಸುವುದಕ್ಕೆ ಅದು ಹಿಂಜರಿಯಲಿಲ್ಲ. ಆ ಮಾತು ಬೇರೆ.

ಸತ್ಯವು ಎಲ್ಲರಲ್ಲೂ ನೆಲಸಿದೆ ಎಂದು ಧರ್ಮಗ್ರಂಥಗಳು ಹೇಳುವಾಗ ಅವು ತಮ್ಮನ್ನೇ ತಾವು ಮೀರುವ ದಾರಿಯಲ್ಲಿವೆ ಎಂದು ಅನ್ನಿಸುತ್ತದೆ. ಹೇಗೆಂದರೆ: ಈ ಗ್ರಂಥಗಳು ಹಾಗೆ ಹೇಳುತ್ತಿರುವುದರಿಂದ ಸತ್ಯವು ಎಲ್ಲರಲ್ಲಿ ನೆಲಸಿರುವುದಲ್ಲ! ಸತ್ಯವು ಗ್ರಂಥವಾಕ್ಯಕ್ಕೆ ತಾನು ವಿಧೇಯವಾಗಿ ಅದನ್ನು ಪಾಲನೆ ಮಾಡುತ್ತಿರುವ ವಿದ್ಯಮಾನವಲ್ಲ! ಸತ್ಯವು ನೆಲಸಿರುವುದನ್ನು ಅರಿತು, ಅನುಭವಿಸಿ, ಈ ಗ್ರಂಥಕಾರರು ಹಾಗೆಂದು ಸಾರಿದರು ಅಷ್ಟೆ. ಆದುದರಿಂದ ಗ್ರಂಥದ ವಾಕ್ಯಗಳನ್ನು ಕಂಠಪಾಠ ಮಾಡುವುದರಿಂದ, ಗ್ರಂಥಗಳನ್ನು ಹಾಡಿಹೊಗಳುವುದರಿಂದ, ನಮ್ಮಲ್ಲೇ ನೆಲಸಿರುವ ಸತ್ಯವನ್ನು ತಿಳಿದೆವು ಎನ್ನಲಾಗುವುದಿಲ್ಲ. ಕಂಠಪಾಠ ಮಾಡುವುದರಿಂದ ನೆನಪಿನ ಶಕ್ತಿ ಧಾರಣ ಶಕ್ತಿ ಬೆಳೆಯುತ್ತದೆ; ನಿಜ. ನೆನಪಿನ ಶಕ್ತಿ ಬೆಳೆದಂತೆ, ನೆನಪೆಂದರೆ ಸಂದರ್ಭಗಳ ಅರ್ಥಪೂರ್ಣ ಜೋಡಣೆಯಾದುದರಿಂದ ಸುಸಂಬದ್ಧವಾದ ಪಾಂಡಿತ್ಯವೂ ಬೆಳೆಯಬಲ್ಲುದು- ನಿಜ. ಇದರಿಂದ ಸಂಸ್ಕೃತಿಯೂ ಬೆಳೆಯುತ್ತ ಹೋಗುತ್ತದೆ ಎನ್ನುವುದೂ ನಿಜ. ಆದರೆ ಮೂಲಭೂತ ವಿಷಯವೆಂದರೆ ಇವೆಲ್ಲದರಿಂದ ಸತ್ಯದ ಅನುಭವವಾಯಿತು ಎನ್ನುವಂತಿಲ್ಲ. ಧರ್ಮಗ್ರಂಥಗಳ ಅಧ್ಯಯನವೇ ಇಲ್ಲದವರಿಗೂ, ನಿರಕ್ಷರರಿಗೂ ತಮ್ಮಲ್ಲಿರುವ ಸತ್ಯದ ಅನುಭವವಾಗಬಹುದು; ಅದಕ್ಕೆ ಯಾವ ಅಡ್ಡಿಯೂ ಇಲ್ಲ. ಸತ್ಯಕ್ಕೆ ಪಾಂಡಿತ್ಯದ ಯಾವ ಬಗೆಯ ಹಂಗೂ ಇಲ್ಲ. ಎಲ್ಲ ಬಗೆಯ ಹಂಗುಗಳಿಂದ ನಮ್ಮ ಮನಸ್ಸನ್ನು ಮೇಲೆತ್ತಬಲ್ಲ ಸತ್ಯವು ತಾನು ಯಾವ ಹಂಗಿಗೆ ಒಳಗಾಗಿರುವುದು ಸಾಧ್ಯ? ಮನುಷ್ಯೇತರ ಜೀವಿಗಳಲ್ಲೂ ಸತ್ಯವು ನೆಲಸಿದೆ ಎನ್ನುವಾಗ ಈ ಜೀವಿಗಳಿಗಂತೂ ಯಾವ ಗ್ರಂಥಗಳ ಹಂಗಿಲ್ಲವಲ್ಲ! ಆದುದರಿಂದ, ಸತ್ಯದ ಸರ್ವವ್ಯಾಪಕತೆಯನ್ನು ಸೂಚಿಸುತ್ತಲೇ ಧರ್ಮಗ್ರಂಥಗಳು ತಮ್ಮನ್ನು ತಾವೇ ಮೀರಿದವು! ಮನುಷ್ಯರು ತಮ್ಮನ್ನು ತಾವೇ ನೋಡುವಂತೆ ಮಾಡಿದವು. ಇದು ಅರ್ಥವಾಗದೆ, ನಾವು, ನಾವು ನಂಬಿದ ಗ್ರಂಥಗಳೆಂದುಕೊಂಡು ಯಾವುದೋ ಮೋಹದಿಂದ ಗ್ರಂಥಗಳಿಗೆ, ವ್ಯಕ್ತಿಗಳಿಗೆ ಜೋತು ಬಿದ್ದರೆ ಸತ್ಯಕ್ಕೆ ಅಪಚಾರವಾಗುವುದು ಖಂಡಿತ. ಇಂಥ ನಕ್ಷತ್ರಗಳಲ್ಲಿ ಇಷ್ಟು ಮಳೆ ಬೀಳುತ್ತದೆ ಎಂದು ಸಾರುವ ಪಂಚಾಂಗವನ್ನು ಹಿಂಡಿದರೆ ಒಂದು ಹನಿ ನೀರೂ ಬೀಳದು ಎಂದು ಶ್ರೀ ರಾಮಕೃಷ್ಣರು ಗ್ರಂಥಜೀವಿಗಳನ್ನು ಛೇಡಿಸಿದ್ದು ಮಾರ್ಮಿಕವಾಗಿದೆ!

ನಮ್ಮ ಕವಿಗಳ ಒಳನೋಟ ಇಂಥ ವಿಷಯಗಳಲ್ಲೆಲ್ಲ ಅಪೂರ್ವವಾದದ್ದು. ನಿನ್ನೊಳಗೆ ನೆಲಸಿರುವ ಸತ್ಯವನ್ನು ನೀನು ತಿಳಕೋ ಎಂದು ಹೇಳಿ ಗ್ರಂಥವಾಕ್ಯಗಳು ತಾವು ವಿಶ್ರಮಿಸಿದರೆ, ನಮ್ಮ ಕವಿಗಳು ಸರ್ವವ್ಯಾಪಿಯಾದ ಸತ್ಯವನ್ನು ಒಂದು ಪಾತ್ರವಾಗಿ ತಮ್ಮ ಕಾವ್ಯದಲ್ಲಿ ರೂಪಿಸಿಕೊಂಡು, ಅಂಥದೊಂದು ಪಾತ್ರವು ತನ್ನನ್ನು ಅರಿತವರೆಂದುಕೊಂಡವರ ಒಡನೆಯೂ ಹೇಗೆ ಅ-ನಿರೀಕ್ಷಿತವಾಗಿ ತನ್ನನ್ನು ಅಲ್ಲಗಳೆದುಕೊಂಡಂತೆ ವರ್ತಿಸುತ್ತ ನಿಬ್ಬೆರಗನ್ನುಂಟುಮಾಡುವುದನ್ನು ಚಿತ್ರಿಸಲು ಹಾತೊರೆಯುವರು. ಕುಮಾರವ್ಯಾಸನು ಚಿತ್ರಿಸಿದ ಕೃಷ್ಣ ಇಂಥವನು!

ಸಂಧಾನಕ್ಕೆಂದು ಬಂದ ಕೃಷ್ಣ, ಕೌರವನ ಅರಮನೆಗೆ ಹೋಗದೆ ಅದಕ್ಕೆ ಮುನ್ನ ತನ್ನ ಭಕ್ತನೇ ಆದ ವಿದುರನ ಮನೆಗೆ ಅನಿರೀಕ್ಷಿತವೆಂಬಂತೆ ಆಗಮಿಸುವನು. ತನ್ನ ಮನೆ ಬಾಗಿಲ ಮುಂದಿನ ಬೀದಿಯಲ್ಲಿ ಕೃಷ್ಣನನ್ನು ವಿದುರ ಎರಡು ದೋರದ ಗಾಢಭಕ್ತಿಯ ಭರದ ಲವಲವಿಕೆಯಲಿ ಎದುರುಗೊಂಡನು. ಕೃಷ್ಣನನ್ನು ನೋಡುತ್ತ ನೋಡುತ್ತ, ವಿದುರ, ಭಾವ ಸಮಾಧಿಗೆ ಒಳಗಾದನು. ನೆನೆವ ಸನಕಾದಿಗಳಿಗೊಮ್ಮೆಯು ಮನಗೊಡದ ಮಹಿಮಾವಲಂಬನು ಮನೆಗೆ ಬಹ ಕರುಣಾಳುತನ ಹೊಸತೆಂದು ಮನಹೊಲಬುದಪ್ಪಿದನು. ಭಕ್ತ ಕವಿಯಾದ ಕುಮಾರವ್ಯಾಸನಿಗೆ ಸಾಂಸ್ಕೃತಿಕ ನೆನಪುಗಳನ್ನೆಲ್ಲ ಮೀರಿ ಸತ್ಯ ಈಗ ಹೊಚ್ಚ ಹೊಸದೆಂಬಂತೆ ಸಂಭವಿಸುತ್ತಿದೆ ಎಂದು ಬಣ್ಣಿಸುವ ಅತಿಶಯವಾದ ಹಂಬಲ. ಆದುದರಿಂದಲೇ, ಸನಕಾದಿಗಳಿಗೆ ಒಲಿಯದ ದೇವರು ಈಗ ವಿದುರನ ಮನೆಗೆ ಬಂದ ಎನ್ನುತ್ತಿದ್ದಾನೆ. ವೇದೋಪನಿಷತ್ತುಗಳಿಗೆ ಮುನಿಗಳು ನಡೆಸುವ ಯಜ್ಞಯಾಗಾದಿ ಕರ್ಮಕಾಂಡಗಳಿಗೆ, ತಾರ್ಕಿಕರ ವಿಶ್ಲೇಷಣೆಗಳಿಗೆ ಸಿಗದ ಅನಾದಿಸಿದ್ಧ ಕೃಷ್ಣ, ವಿದುರನ ಮನೆ ಬಾಗಿಲ ಮುಂದೆ ಸುಳಿದ ಎನ್ನುತ್ತಿದ್ದಾನೆ.

ವಿದುರ, ಕೃಷ್ಣನನ್ನು ಹಾಡಿ ಹೊಗಳಿದ, ಮಣಿದ; ಕುಣಿದ. ಮೈಮರೆದ ಹರುಷದ ಗಾಡಿಕೆಯಲಪ್ರತಿಮನೆಸೆದನು ಬಕುತಿ ಕೇಳಿಯಲಿ. ಎನ್ನುತ್ತಾನೆ ಕವಿ. ಎಲ್ಲ ನಿಜ. ವಿದುರನ ಈ ಎಲ್ಲ ಭಾವೋದ್ರೇಕದ ನುಡಿ – ನಡೆಗಳಿಗೆ ಕೃಷ್ಣನ ಪ್ರತಿಕ್ರಿಯೆ ಏನು? ಇಲ್ಲಿದೆ ಕುಮಾರವ್ಯಾಸನ ಪದ್ಯ.

ಹಸಿದು ನಾವೈತಂದರೀ ಪರಿ/ ಮಸಗಿ ಕುಣಿದಾಡಿದೊಡೆ ಮೇಣೀ/
ವಸತಿಯನು ಸುಗಿದೆತ್ತಿ ಬಿಸುಟರೆ ತನಗೆ ತಣಿವಹುದೆ?//
ವಸುಮತಿಯ ವಲ್ಲಭರು ಮಿಗೆ/ ಪ್ರಾರ್ಥಿಸಿದೊಡೊಲ್ಲದೆ ಬಂದೆವೈನಾ
ಚಿಸದಿರೈ ವಿದುರ ಎನುತೊಳಹೊಕ್ಕನಸುರಾರಿ//

ಕೃಷ್ಣ, ಭೂಮಿಯ ಮೇಲೇ ನಿಂತಿದ್ದಾನೆ ಇಳಿದು ಬಂದ ದೈವವಾದರೂ, ಹಸಿವಾಗುತ್ತಿದೆ ಎನ್ನುತ್ತಾನೆ. ಹೊಗಳಿಕೆಯಿಂದ ಹೊಟ್ಟೆ ತುಂಬುವುದೇನು? ಎಂಬ ಅಪ್ಪಟ ವ್ಯವಹಾರದ ಮಾತಾಡುತ್ತಿದ್ದಾನೆ. ಇಲ್ಲದಕ್ಕಿಂತ ನಾಚಿಸದಿರೈ ವಿದುರ ಎನ್ನುವ ಮಾತು ಅದ್ಭುತ! ಭಕ್ತನ ಮಾತಿಗೆ ದೇವರು ಹೂಂಗುಟ್ಟುವುದಿಲ್ಲ. ತನ್ನನ್ನು ಬೇರೆಯೇ ಒಂದು ರೀತಿಯಲ್ಲಿ ಅರ್ಥಮಾಡಿಕೊಳ್ಳುವುದು ಸಾಧ್ಯ ಎಂದು ಸೂಚಿಸುತ್ತಿದ್ದಾನೆ! ಎಲ್ಲೂ ಭಕ್ತಿಯು ಸ್ಥಗಿತಗೊಳ್ಳುವುದಕ್ಕೆ ದೇವರು ಬಿಡಲಾರ. ಅದು ಸತ್ಯದ ಗುಣ!

■ ತೋಷ

## ಮಾತೇ ಮುತ್ತು

★ ಸುಖದ ದಾಹ ಮನೆಯೊಳಗೆ ಅತಿಥಿಯಂತೆ ಬರುತ್ತದೆ, ಬಳಿಕ ಅತಿಥೇಯನಾಗುತ್ತದೆ. ಕೊನೆಗೆ ಮನೆಯನ್ನೇ ಆಳುತ್ತದೆ.

-ಖಲೀಲ್ ಗಿಬ್ರಾನ್

★ ನಾವೇನು ಯೋಚಿಸುತ್ತೇವೆ, ತಿಳಿದುಕೊಂಡಿದ್ದೇವೆ ಅಥವಾ ನಂಬಿದ್ದೇವೆ ಎಲ್ಲವೂ ಕೊನೆಯಲ್ಲಿ ಬೀರುವ ಪರಿಣಾಮ ಅಷ್ಟಕ್ಕಷ್ಟೆ. ನಾವೇನು ಮಾಡಿದ್ದೇವೆ ಎನ್ನುವುದಷ್ಟೇ ಪರಿಣಾಮ ಬೀರುವುದು.

-ಜಾನ್ ರಸ್ಕಿನ್

★ ಒಬ್ಬ ಮನುಷ್ಯನಿಗೆ ತನ್ನ ಬಗ್ಗೆಯೇ ನಗಲು ಸಮಯವಿಲ್ಲ ಎಂದಾದಲ್ಲಿ, ಅದು ಇತರರು ಅವನನ್ನು ನೋಡಿ ನಗಲು ಒಳ್ಳೆಯ ಸಮಯ.

-ಥಾಮಸ್ ಸಾಝ್

★ ಸಾಮಾನ್ಯವಾಗಿ ನಾಳೆ ಎನ್ನುವುದು ಇಡೀ ವಾರದಲ್ಲಿ ಪುರುಸೊತ್ತೇ ಇಲ್ಲದ ದಿನ.

-ಸ್ಪೇನ್‌ನ ಗಾದೆ

★ ಸತ್ಯವನ್ನು ಹುಡುಕಾಡುವವನನ್ನು ನಂಬಿ; ಸತ್ಯವನ್ನು ಕಂಡುಹಿಡಿದವನನ್ನು ಸಂಶಯಿಸಿ.

-ಆಂಡ್ರೆ ಗೈಡ್

★ ಬೇಸರಕ್ಕೆ ಕುತೂಹಲವೇ ಔಷಧಿ. ಕುತೂಹಲಕ್ಕೆ ಯಾವ ಔಷಧಿಯೂ ಇಲ್ಲ.

-ಎಲೆನ್ ಪಾರ್

★ ಬರಿಹೊಟ್ಟೆಯಲ್ಲಿ ಇರುವವನಿಗೆ ಆಹಾರವೇ ದೇವರು.

-ಮಹಾತ್ಮ ಗಾಂಧಿ